ಶ್ರೀ ಡಿ. ಆರ್. ಕರಿಗೌಡ.—ಹಣದ ವೆಚ್ಚದ ದೃಷ್ಟಿಯಿಂದ ಆ ಸಲಹೆಯನ್ನು ಅಂಗೀಕರಿಸಲಿಲ್ಲವೆಂದು ಹೇಳಿದ್ದೀರಿ, ಎಷ್ಟು ಖರ್ಚಾಗುತ್ತದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸುಮಾರು ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ವರ್ಷ ವರ್ಷವೂ ಇಷ್ಟಾಗುತ್ತದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೌದು.

Lokapavani Anicut.

Q.—604. **Sri G. S. BOMME GOWDA** (Mandya).—

Will the Government be pleased to state :—

(*a*) whether any representation has come to them in the matter of constructing an anicut across the Lokapavani river and feed the tanks since some parts of Basaralu Hobli and Dudda Hobli of Mandya are barren and famine stricken ;

(*b*) whether they do no consider that if the work of the Lokapavani anicut work is started this year it would help in preventing famine ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) The project has been deferred after due consideration.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ಪ್ರದೇಶದಲ್ಲಿ ಮರಾಮತ್ ನಚಿವರು ಪ್ರವಾಸ ಮಾಡಿದ್ದಾರೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿದ್ದೇನೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅಲ್ಲಿ ರೈತರು ಕಷ್ಟದಲ್ಲಿದ್ದಾರೆಂಬುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ, ಆದರೆ ಈ ಯೋಜನೆಯ ವಿಷಯದಲ್ಲಿ ಒಂದು ಮಾತು ಹೇಳಿಬೇಕಾಗಿದೆ. 1948-49ನೆಯ ಇಸವಿಯಲ್ಲಿ ಇದನ್ನು ಪರಿಶೀಲನೆ ಮಾಡಿದಾಗ ಐದು ಲಕ್ಷದ ತೊಂಭತ್ತು ಸಾವಿರ ಅಥವಾ ಸುಮಾರು ಆರುಲಕ್ಷ ಖರ್ಚಾಗುತ್ತದೆ; ಪ್ರತಿಫಲ .4 3 ಎಂದು ಕಂಡುಬಂದಿತು. ಇದರಿಂದ 23-9-1949ರಲ್ಲಿ ಒಂದು ಆಜ್ಞೆಮಾಡಿ ಇದನ್ನು defer ಮಾಡಿದೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈಚೆಗೆ ಬೇರೆ ಅಂದಾಜು ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ, ಮಾಡುತ್ತಿದ್ದಾರೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಅರೀತಿ ಬಂದರೆ ಕ್ಷಾಮ ಪ್ರದೇಶವಾದುದರಿಂದ ಅದಕ್ಕೆ ಅದಷ್ಟು ನಹಾಯ ಮಾಡುವುದು ಕರ್ತವ್ಯವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನ್ಪೆಲ್ಪವಾದರೂ ಲಾಭದಾಯಕವಾಗಿದ್ದರೆ ಪುನಃ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈಗ ಸರ್ಕಾರದವರು ಎಷ್ಟು ಪ್ರತಿಫಲ ಬರುತ್ತದೆಂದು ಅಪ್ಪಣೆ ಕೊಡಿಸಿದ್ದಾರೋ ಅಷ್ಟೇ ಬರುವ ಇನ್ನಾವುದಾದರೂ ಯೋಜನೆಯನ್ನು ತೆಗೆದುಕೊಂಡಿದ್ದರೆ ಇದನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಏಕ್ಕದ್ದಕ್ಕೆ ಯಾವ ನಿಯಮ ಅನ್ವಯಿಸುತ್ತದೆಯೋ ಇದನ್ನೂ ಹಾಗೆಯೇ ಮಾಡುತ್ತೇವೆ.

Officers of Electric Department (Charges of Corruption).

Q.—660. **Sri S. GOPALA GOWDA** (Sagar-Hosanagar).—

Will the Government be pleased to state :—

(*a*) the officers of the Electrical Department against whom charges of corruption, are framed by the Anti-Corruption Department (detailed information *re* the names of those officers, their posts, the present position and the charges framed be furnished) ;

(*b*) whether it has come to their notice that the officers of this department are improperly making use of the services of the departmental employees for their household work ?

A.—**Dr. R. NAGAN GOWDA** (Minister for Agriculture).—

(*a*) One Junior Engineer.
One Line Inspector.
One Operator.
One Meter Inspector.
One Junior Accountant.

As the enquiries are pending, it is not in the public interest to furnish the other particulars asked for.

(*b*) A few instances have come to notice.

ಶ್ರೀ ಎಸ್. ಗೋಪಾಲಗೌಡ.—ವಿವರಗಳನ್ನು ತಿಳಿಸುವುದು ಆಡಳಿತ ದೃಷ್ಟಿಯಿಂದ ಸೂಕ್ತವಲ್ಲವೆಂದು ತಿಳಿಸಿದ್ದೀರಿ. ಅವರ ಹೆಸರು, ಅವರು ಯಾರು ಎನ್ನುವುದನ್ನು ತಿಳಿಸುವುದರಿಂದ ವಿಚಾರಣೆಗೆ ಏನು ತೊಂದರೆಯಾಗುತ್ತದೆ?

ಡಾ॥ ಆರ್. ನಾಗನಗೌಡ.—ವಿಚಾರಣೆ ನಡೆಯುತ್ತಿರುವಾಗ ಅದು *sub-judice* ಎಂದು ಅಂದುಕೊಳ್ಳಬೇಕು. ಯಾವ ಪೋಸ್ಟ್‌ನಲ್ಲಿ ಇದ್ದಾರೆ ಎಂಬ information ಕೊಟ್ಟಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಅವರು ಯಾರು ಎನ್ನುವುದನ್ನು ತಿಳಿಸುವುದಕ್ಕೆ ಆಗುವುದಿಲ್ಲವೇ ?

ಡಾ॥ ಆರ್. ನಾಗನಗೌಡ.—Enquiry ಜರಗುತ್ತಿದೆ. ಪೂರೈಸಿದ ಮೇಲೆ ಇಂತಹವರ ಮೇಲೆ